


ದಯಾನಂದ ಸರಸ್ವತಿ ಅವರ ಅಂಚೆಚೀಟಿ



1976ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ ದಕ್ಷಿಣ ಆಫ್ರಿಕಾದಲ್ಲಿನ 'ಆರ್ಯ ಸಮಾಜ'ದ ಸದಸ್ಯರು.
ಚಿತ್ರ: ಸುಧಾ ಆರ್ಕೈವ್ಸ್

# ಮೂರು ಅಂಗಗಳ ವಿವಾಹವಿಧಿ



ಜೈಪುರದ ಆರ್ಯ ಸಮಾಜದ ವೇದಿಕೆಯಲ್ಲಿ ಮುಸ್ಲಿಂ ಕುಟುಂಬವೊಂದು ವಿವಾಹ ಸಂಹಿತೆಗೆ ಒಳಗಾಗುತ್ತಿರುವುದು.

ಆರ್ಯಸಮಾಜದ ವಿವಾಹವಿಧಿಯಲ್ಲಿ ಮೂರು ಮುಖ್ಯ ಅಂಗಗಳಿವೆ. ಅವು, 'ಪಾಣಿಗ್ರಹಣ', 'ಲಾಜಾಹೋಮ' ಮತ್ತು 'ಸಪ್ತಪದಿ'.

'ಪಾಣಿ ಗ್ರಹಣ' ಎಂದರೆ ಕೈಹಿಡಿಯುವುದು. ವರ ಮತ್ತು ವಧು ಕೈಗಳನ್ನು ಹಿಡಿಯುತ್ತಾರೆ. 'ಸೌಭಾಗ್ಯದ ಪ್ರಾಪ್ತಿಗಾಗಿ ನಿನ್ನ ಕೈ ಹಿಡಿಯುತ್ತಿದ್ದೇನೆ. ನೀನು ಧರ್ಮದಿಂದ ನನ್ನ ಪತ್ನಿ. ಈಕೆಯನ್ನು ದೇವರೇ ನನಗೆ ಕರುಣಿಸಿದ್ದಾನೆ. ಈಕೆಗೆ ಮರೆಮಾಡಿ ಯಾವ ಸುಖವನ್ನೂ ಅನುಭವಿಸುವುದಿಲ್ಲ' ಎಂಬ ವಾಕ್ಯಗಳಿವೆ.

ಲಾಜಾಹೋಮದಲ್ಲಿ ವಧುವರರು ತಮ್ಮ ಅಂಜಲಿಗಳನ್ನು ಜೋಡಿಸುತ್ತಾರೆ. ಅದರಲ್ಲಿ ಭತ್ತದ ಅರಳನ್ನು ಹಾಕುತ್ತಾರೆ. ತುಪ್ಪದೊಂದಿಗೆ ವಧುವು ಮಂತ್ರಗಳನ್ನು ಉಚ್ಚರಿಸುತ್ತಾಳೆ. ಇಬ್ಬರೂ ಒಟ್ಟಿಗೆ ಅಂಗೈಯಲ್ಲಿರುವ ಅರಳನ್ನು ಅಗ್ನಿಗೆ ಆಹುತಿಯಾಗಿ ಅರ್ಪಿಸುತ್ತಾರೆ. 'ನನ್ನ ಪತಿ ಆಯುಷ್ಮಂತನಾಗಲಿ. ನನ್ನ ಪಿತೃಕುಲದವರೂ ಮುಂದೆ ಬರಲಿ' ಎನ್ನುತ್ತಾಳೆ.

ಮೂರನೆ ಮುಖ್ಯವಿಧಿ 'ಸಪ್ತಪದಿ'. ವಧೂವರರಿಬ್ಬರೂ ಏಳು ಹೆಜ್ಜೆಗಳನ್ನು ಜೊತೆಯಾಗಿ ಇಡುತ್ತಾರೆ. ಒಂದೊಂದು ಹೆಜ್ಜೆಗೂ ಒಂದೊಂದು ಮಂತ್ರವನ್ನು ಹೇಳುತ್ತಾರೆ.

- ಅನ್ನ ಆಹಾರಗಳ ಸಲುವಾಗಿ ಒಂದನೆಯ ಹೆಜ್ಜೆಯನ್ನು ಇಡೋಣ.
- ಬಲ ಸಂಪಾದನೆಗಾಗಿ ಎರಡನೆಯ ಹೆಜ್ಜೆಯನ್ನು ಇಡೋಣ.
- ಐಶ್ವರ್ಯದ ಪುಷ್ಟಿಗಾಗಿ ಮೂರನೆಯ ಹೆಜ್ಜೆಯನ್ನು ಇಡೋಣ.
- ಸುಖ ಶಾಂತಿಯ ಪ್ರಾಪ್ತಿಗಾಗಿ ನಾಲ್ಕನೆಯ ಹೆಜ್ಜೆಯನ್ನು ಇಡೋಣ.
- ಸಂತತಿಯ ಸಲುವಾಗಿ ಐದನೆಯ ಹೆಜ್ಜೆಯನ್ನು ಇಡೋಣ.
- ಋತುಗಳಿಗೆ ಅನುಗುಣವಾದ ಜೀವನಚರ್ಯೆಗಾಗಿ ಆರನೆಯ ಹೆಜ್ಜೆಯನ್ನು ಇಡೊಣ.
- ಮಿತ್ರಳಾಗಿ ಏಳನೆಯ ಹೆಜ್ಜೆಯನ್ನು ಇಡುವವಳಾಗು.

'ಸಖಾ ಸಪ್ತಪದಿ ಭವ' ಎಂಬ ಏಳನೆಯ ಹೆಜ್ಜೆ, ಪತ್ನಿಯನ್ನು ಮಿತ್ರಳಾಗಿ ಹೆಜ್ಜೆ ಇಡಲು ಆಹ್ವಾನಿಸುತ್ತದೆ. ಪತಿ–ಪತ್ನಿಯರ ನಡುವೆ ಅತ್ಯಂತ ಮುಖ್ಯವಾದದ್ದು ಈ ಗೆಳೆತನದ ಭಾವವೇ ಅಲ್ಲವೆ?

'ಹತ್ತು ಮಕ್ಕಳನ್ನು ಪಡೆಯಿರಿ' ಎಂಬ ಮಾತು ಬಂದರೂ, ಇದನ್ನು ಗೃಹಸ್ಥಾಶ್ರಮದ 25 ವರ್ಷಗಳಲ್ಲಿ ಸಂಭವಿಸಬಹುದಾದ ಸಂತಾನದ ಸಂಖ್ಯೆಯಾಗಿ ಭಾವಿಸಬೇಕೇ ಹೊರತು, ಅನಿವಾರ್ಯ ನಿಯಮವಾಗಿ ಅಲ್ಲ ಎಂಬುದು ಮಹರ್ಷಿಗಳ ವಿಚಾರವಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಮೂರೂವರೆ ಸಾವಿರ ವರ್ಷಕ್ಕೂ ಹಿಂದಿನ ಆ ಸಾಮಾಜಿಕ ಸ್ಥಿತಿಯಲ್ಲಿ ಹುಟ್ಟಿದ ಎಷ್ಟು ಮಕ್ಕಳು ಬದುಕಿರುತ್ತಿದ್ದರು? ಇಂದಿನ ಸ್ಥಿತಿಯಲ್ಲಿ ಈ 'ಹತ್ತು ಮಕ್ಕಳ' ಆಶೀರ್ವಾದವನ್ನು ಬಿಡುವುದು ಮೇಲು.

ವೇದಗಳ ವಿವಾಹ ವಿಧಿಯಲ್ಲಿ ಗಂಡು ಹೆಣ್ಣಿಗೆ ತಾಳಿ ಕಟ್ಟುವ ಪ್ರಸಂಗವಿಲ್ಲ. ಆದರೂ ಹೆತ್ತವರು ಒತ್ತಾಯಿಸಿದಾಗ, ಆರ್ಯಸಮಾಜದ ಮದುವೆಯಲ್ಲಿಯೂ, ಕಾರ್ಯಕರ್ತರು ತಾಳಿ ಕಟ್ಟಲು ಅವಕಾಶ ಮಾಡಿಕೊಡುವುದುಂಟು.